ಶ್ರೀ ಎಚ್.ಡಿ. ಕುಮಾರಸ್ವಾಮಿ : ಇವತ್ತು ನಿಯೋಗ ಬಂದಿದ್ದಕ್ಕೋಸ್ಕರವೇ ಈಗಾಗಲೇ ಗಮನಹರಿಸಿದ್ದೇನೆ. ನೀರಾವರಿ ಇಲಾಖೆ ಕಾರ್ಯಗಳು ನಿಲ್ಲಲು ಸಿಮೆಂಟ್ ಬೆಲೆ ಹೆಚ್ಚಳ ಕಾರಣವಾಗಿದೆ. ಅದರ ಬಗ್ಗೆ ಮತ್ತು ರಸ್ತೆಗಳ ವಿಷಯದಲ್ಲೂ ಸರ್ಕಾರ ಮುಂದಿನ ಕ್ಯಾಬಿನೆಟ್‌ನಲ್ಲಿ ಒಂದು ತೀರ್ಮಾನಕ್ಕೆ ಬಂದು ಕೆಲಸವನ್ನು ತೀವ್ರಗತಿಯಲ್ಲಿ ಪ್ರಾರಂಭ ಮಾಡಲು ತೀರ್ಮಾನ ಮಾಡುತ್ತೇವೆ. ಕೆಲಮಿಟಿ ಫಂಡ್‌ದು ಟೈಂ ಎಕ್ಸ್‌ಟೆನ್‌ಶನ್ ಕೇಳಿದ್ದಾರೆ ಅದಕ್ಕೂ ಗಮನಹರಿಸುತ್ತೇನೆ.

(ಊ) ಕರ್ನಾಟಕ ಲೋಕಸೇವಾ ಆಯೋಗ ಪ್ರಥಮ ದರ್ಜೆ ಸಹಾಯಕರುಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿರುವುದರಲ್ಲಿ ಹೆಚ್ಚುವರಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಶ್ರೀ ಎಚ್. ಆಂಜನೇಯ (ಭರವಸುಸಾಗರ) : ಮಾನ್ಯ ಅಧ್ಯಕ್ಷರೆ ಕರ್ನಾಟಕ ಲೋಕಸೇವಾ ಆಯೋಗದಿಂದ 2-6-2005ರಂದು 830 ಪ್ರಥಮ ದರ್ಜೆ ಸಹಾಯಕ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿತು. ಈ ಪರೀಕ್ಷೆಯಲ್ಲಿ ಕುಳಿತವರು 1,83,808 ಅಭ್ಯರ್ಥಿಗಳು. ಈ ಹುದ್ದೆಗಳನ್ನು ತುಂಬುವ ಸಂದರ್ಭದಲ್ಲಿ ಅಧಿಸೂಚನೆ ಹೊರಡಿಸುವ ಕಾಲದಲ್ಲಿ ಸರ್ಕಾರದಲ್ಲಿ ಇಷ್ಟು ಹುದ್ದೆ ಮಾತ್ರ ಖಾಲಿ ಇದ್ದವು. ಈಗ ವಿವಿಧ ಇಲಾಖೆಗಳಲ್ಲಿ ಸುಮಾರು ಒಂದು ಸಾವಿರ ಹುದ್ದೆಗಳು ಖಾಲಿ ಇವೆ. ಒಂದು ಸಲ ಸ್ಪರ್ಧಾತ್ಮಕ ಪರೀಕ್ಷೆ ನಡೆಸುವುದಕ್ಕೆ ಕರ್ನಾಟಕ ಸರ್ಕಾರದಿಂದ, ಲೋಕಸೇವಾ ಆಯೋಗದಿಂದ ಎಷ್ಟು ವೆಚ್ಚವಾಗುತ್ತದೆಂದರೆ, ಒಂದೂವರೆ ಕೋಟಿ ರೂಪಾಯಿಗಳಷ್ಟು ಖರ್ಚಾಗುತ್ತದೆ. ಅನಂತರ, ಸುಮಾರು ಎರಡು ಲಕ್ಷ ವಿದ್ಯಾರ್ಥಿಗಳು ಅದಕ್ಕೆ ತಯಾರಾಗಿ ಪರೀಕ್ಷೆ ಬರೆಯುವುದಕ್ಕೆ ಬರುತ್ತಾರಲ್ಲ. ಅವರದು ಸರಾಸರಿ ಏನಿಲ್ಲವೆಂದರೂ ಐದು ಕೋಟಿ ರೂಪಾಯಿಗಳಷ್ಟಾದರೂ ಖರ್ಚಾಗುತ್ತದೆ. ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು 1996ರಲ್ಲಿ ಮಾತ್ರ ತುಂಬಿದ್ದರು. ಅದಾದ ನಂತರ, ಹತ್ತು ವರ್ಷಗಳ ನಂತರ ಈ ಪರೀಕ್ಷೆ ನಡೆದಿದೆ. ಈ ಪರೀಕ್ಷೆ ಪ್ರಕ್ರಿಯೆಯಲ್ಲಿ ಹೆಚ್ಚುವರಿ ಹುದ್ದೆಗಳು ಕರ್ನಾಟಕ ಸರ್ಕಾರದಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆಯೋ, ಆ ಹುದ್ದೆಗಳನ್ನು ಅಧಿಕೃತವಾಗಿ ತಾವು ಲೋಕಸೇವಾ ಆಯೋಗಕ್ಕೆ ಕಳುಹಿಸಿದರೆ, ಆ ಪ್ರಕ್ರಿಯೆಯಲ್ಲೇ ಈ ಅಭ್ಯರ್ಥಿಗಳಿಗೂ ಕೂಡ ಮಾಡಿದಲ್ಲಿ ಈ ಅಭ್ಯರ್ಥಿಗಳಿಗೂ ಉದ್ಯೋಗ ದೊರಕುವ ಅವಕಾಶ ಲಭಿಸಿದಂತಾಗುತ್ತದೆ. ಎಷ್ಟೋ ಸಲ ಕೆಲವು ಹುದ್ದೆಗಳು, ಅವು ಪ್ರಥಮ ದರ್ಜೆ ಇರಬಹುದು, ಕ್ಲಾಸ್-1, ಕ್ಲಾಸ್-2 ಇರಬಹುದು, ಲೋಕಸೇವಾ ಆಯೋಗಕ್ಕೆ ನಾವು ಹುದ್ದೆಗಳನ್ನು ಕಡಿಮೆ ಕೊಟ್ಟಿರುತ್ತೇವೆ, ಆಯೋಗಕ್ಕೆ ಅನಂತರ ಜಾಸ್ತಿ ಕೊಡಬಹುದು.

ಅಧ್ಯಕ್ಷರು : ಮಾನ್ಯ ಆಂಜನೇಯರವರೆ, ಎಲ್ಲರಿಗೂ ಅವಕಾಶ ಕೊಡಬೇಕು, ತಾವು ಈಗ ಗಮನ ಸೆಳೆದಿದ್ದೀರಿ.

ಶ್ರೀ ಹೆಚ್. ಆಂಜನೇಯ : ಆದುದರಿಂದ, ಮಾನ್ಯ ಮುಖ್ಯಮಂತ್ರಿಗಳು ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕರನ್ನು ಹೆಚ್ಚೆಚ್ಚು ಸಂಪರ್ಕ ಮಾಡುತ್ತಿದ್ದಾರೆ. ಆ ಅಭ್ಯರ್ಥಿಗಳೆಲ್ಲರೂ

ಕೂಡ ಅವರ ಹತ್ತಿರ ಹೋಗಿ ಹೇಳಿದ್ದಾರೆ. ಸ್ವಾಮಿ, ನಮಗೆ ವಯೋಮಿತಿ ಮೀರುತ್ತಿದೆ, ಕೇವಲ 830 ಅಭ್ಯರ್ಥಿಗಳಿಗೆ ಮಾತ್ರ ಕರೆದಿದ್ದೀರಿ. ಹೆಚ್ಚುವರಿ ಹುದ್ದೆ ನೀಡಿ ನಮಗೂ ಉದ್ಯೋಗ ದೊರಕಿಸಿಕೊಡಬೇಕೆಂದು ದಿನನಿತ್ಯವೂ ಅಭ್ಯರ್ಥಿಗಳು ಹೋಗಿ ಅವರಲ್ಲಿ ಮನವಿ ಮಾಡಿ ಕೊಳ್ಳುತ್ತಿದ್ದಾರೆ. ಈ ದೃಷ್ಟಿಯಿಂದ ಕರ್ನಾಟಕ ಸರ್ಕಾರದಲ್ಲಿ ಎಷ್ಟು ಹೆಚ್ಚುವರಿ ಹುದ್ದೆಗಳಿವೆಯೋ, ಆ ಹುದ್ದೆಗಳನ್ನು ಕ್ರಿಯೇಟ್ ಮಾಡಿ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಕಳುಹಿಸಬೇಕು. ಈ ಪ್ರಕ್ರಿಯೆಯಲ್ಲಿ ಆ ಅಭ್ಯರ್ಥಿಗಳೂ ಕೂಡ ಉತ್ತರ ಬರೆಯುವಂತೆ... ಇದಕ್ಕೆ ಉತ್ತರ ಕೊಟ್ಟಿದ್ದಾರೆ. ಸರ್ಕಾರದ ಅಧಿಕಾರಿಗಳೆಲ್ಲರೂ ಬರೀ ಜನವಿರೋಧಿ ಆದೇಶಗಳನ್ನೇ ಹೊರಡಿಸತಕ್ಕಂಥವರು. ಆದುದರಿಂದ, ಜನಪರವಾದ ಮುಖ್ಯಮಂತ್ರಿಗಳು ಇಲ್ಲಿ ಹೇಳಬೇಕು. ಅವರು ಕೊಟ್ಟಿರುವ ಈ ನೋಟ್ ಅನ್ನು ಹರಿದು ಬಿಸಾಕಿ. ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಲೋಕಸೇವಾ ಆಯೋಗಕ್ಕೆ ಕೊಟ್ಟು, ಈ ಪ್ರಕ್ರಿಯೆಯಲ್ಲಿ ಅಭ್ಯರ್ಥಿಗಳಿಗೆ ಉದ್ಯೋಗ ಕೊಡಿಸುತ್ತೇವೆಂಬ ಭರವಸೆಯನ್ನು ಮಾನ್ಯ ಮುಖ್ಯಮಂತ್ರಿಗಳು ನೀಡಬೇಕೆಂದು ತಮ್ಮ ಮೂಲಕ ಆಗ್ರಹಪಡಿಸುತ್ತಿದ್ದೇನೆ.

ಅಧ್ಯಕ್ಷರು : ಇನ್ನು ಮುಂದೆ ಈ ರೀತಿ ಮಾತನಾಡಿದರೆ ನಾನು ಯಾರಿಗೂ ಅವಕಾಶ ಕೊಡುವುದಕ್ಕಾಗುವುದಿಲ್ಲ. ಒಬ್ಬೊಬ್ಬ ಸದಸ್ಯರು 5-10 ನಿಮಿಷಗಳನ್ನು ತೆಗೆದುಕೊಂಡರೆ, ಉಳಿದವರೆಲ್ಲರೂ ಕಾಯಬೇಕೇ? ಅವರೂ ಸಹ ಅವರವರ ಕ್ಷೇತ್ರಗಳಿಗೆ ಸಂಬಂಧಿಸಿದ ವಿಷಯಗಳ ಮಹತ್ವದ ಬಗ್ಗೆ ಕೇಳಿ ಸರ್ಕಾರದ ಗಮನ ಸೆಳೆದು ಉತ್ತರ ತೆಗೆದುಕೊಳ್ಳಬಾರದೇ?

ಶ್ರೀ ಡಿ.ಕೆ. ಶಿವಕುಮಾರ್ : ಅವರು ಹೇಳಿದ ಪೋಸ್ಟ್ ಅನ್ನು ಫಿಲ್-ಅಪ್ ಮಾಡುತ್ತೇವೆಂದು ಹೇಳಿದರೆ ಸಾಕು. ಅವರು ಕೇಳುವುದಿಷ್ಟೆ. 850 ಪೋಸ್ಟ್‌ಗಳನ್ನು ಫಿಲ್-ಅಪ್ ಮಾಡುವಂತೆ ಕೇಳುತ್ತಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅದಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ಈಗಾಗಲೇ ಏನು ವೇಕೆನ್ಸಿ ಇದೆ. ಸ್ಯಾಂಕ್ಷನ್ಡ್ ಪೋಸ್ಟ್ ಇದೆ. ಅಷ್ಟನ್ನೂ ಭರ್ತಿ ಮಾಡುತ್ತೇವೆಂದು ತಾವು ಈ ಹೌಸ್‌ನಲ್ಲಿ ಹೇಳಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ಪ್ರಶ್ನೆ ಅದಲ್ಲ. Further, ನೀವು ಇಂಟರ್‌ವ್ಯೂ ಮಾಡುವುದು ಬೇಡ. ಉಳಿದಿರುವ ವೇಕೆನ್ಸಿಗಳಿಗೆ ಪರೀಕ್ಷೆ ಬರೆದಿರುವ ಆ ಹುಡುಗರಿಗೂ ಮೆರಿಟ್ ಮೇಲೆ ಕೊಟ್ಟುಕೊಂಡು ಬನ್ನಿ ಎಂದು ಕೇಳುತ್ತಿದ್ದಾರೆ. ಇನ್ನೊಂದು ಸಲ ಒಂದು ಸಾವಿರ vacancyಗೆ ಇಂಟರ್‌ವ್ಯೂ ಕರೆಯಬೇಡಿ. ರಿಕ್ರೂಟ್‌ಮೆಂಟ್ ಮಾಡುವುದು ಬೇಡ. ಈಗ ಏನು ರಿಕ್ರೂಟ್‌ಮೆಂಟ್ ಆಗಿದ್ದಾರೆ. ಆ ಲಿಸ್ಟ್‌ನಲ್ಲೇ ತುಂಬಿಕೊಂಡು ಬನ್ನಿ ಅನ್ನುವುದಷ್ಟೇ ಅವರ ಆಗ್ರಹ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಲೋಕಸೇವಾ ಆಯೋಗವು ದಿನಾಂಕ 2-6-05ರ ಅಧಿಸೂಚನೆ ಸಂಖ್ಯೆ ಇ:2:25:2005-

06:ಪಿಎಸ್‌ಸಿಯಲ್ಲಿ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಒಟ್ಟು 532 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿತ್ತು. ಇದಕ್ಕೆ ಉತ್ತರವಾಗಿ 1 ಲಕ್ಷ 98 ಸಾವಿರ 447 ಅರ್ಜಿಗಳನ್ನು ಸ್ವೀಕರಿಸಲಾಗಿತ್ತು ಹಾಗೂ ಅವುಗಳ ಪರಿಶೀಲನೆ ನಂತರ ಅರ್ಹ ಅಭ್ಯರ್ಥಿಗಳಿಗೆ ದಿನಾಂಕ 25–9–2005ರಂದು ಸ್ಪರ್ಧಾತ್ಮಕ ಪರೀಕ್ಷೆಯನ್ನು ಆಯೋಗ ನಡೆಸಿತ್ತು ಒಟ್ಟು 1 ಲಕ್ಷ 83 ಸಾವಿರ 808 ಅಭ್ಯರ್ಥಿಗಳು ಈ ಪರೀಕ್ಷೆಗೆ ಹಾಜರಾಗಿದ್ದರು. ಈ ಎಲ್ಲಾ ಅಭ್ಯರ್ಥಿಗಳ ಅಂಕಿಗಳನ್ನು ದಿನಾಂಕ 8–11–05ರಂದು ಪ್ರಕಟಿಸಲಾಯಿತು. ನಂತರ, 14–12–05 ಮತ್ತು 4–2–06ರ ಅವಧಿಯಲ್ಲಿ ಅಭ್ಯರ್ಥಿಗಳ ಮೂಲ ದಾಖಲಾತಿಗಳನ್ನು ಲೋಕಸೇವಾ ಆಯೋಗವು ಪರಿಶೀಲಿಸಿದೆ. ನೇಮಕಾತಿಗೆ ಸಂಬಂಧಿಸಿದ ಸಾಮಾನ್ಯ ತತ್ವದ ಪ್ರಕಾರ ಎಷ್ಟು ಖಾಲಿ ಹುದ್ದೆಗಳನ್ನು ತುಂಬಲು ಅಧಿಸೂಚನೆ ಹೊರಡಿಸಲಾಗಿತ್ತೋ ಅಷ್ಟು ಹುದ್ದೆಗಳಿಗೆ ಆಯ್ಕೆ ಮಾಡಬೇಕು. ಅದಾಗ್ಯೂ, ವಿವಿಧ ಇಲಾಖೆಗಳಿಂದ 298 ಹೆಚ್ಚುವರಿ ಹುದ್ದೆಗಳಿಗೆ ಆಯ್ಕೆ ನಡೆಸಲು ಸ್ವೀಕರಿಸಲಾದ ಕೋರಿಕೆಗಳನ್ನು ಅದು ಗಮನಿಸಿ ಆಯೋಗವು 532 ಖಾಲಿ ಹುದ್ದೆಗಳ ಜೊತೆಗೆ 298 ಖಾಲಿ ಹುದ್ದೆಗಳನ್ನು ಸೇರಿಸಿ ಆಯ್ಕೆ ಪಟ್ಟಿ ತಯಾರಿಸುತ್ತಿದೆ. ಸದ್ಯದಲ್ಲೇ ಪ್ರಕಟಿಸಲಾಗುವುದೆಂದು ಆಯೋಗವು ತಿಳಿಸಿದೆ. ಈಗ ತಮ್ಮ ಪ್ರಶ್ನೆ ಏನಿದೆಯೆಂದರೆ, further ಏನೆಂದರೆ, ಹಿಂದೆ interviewನಲ್ಲಿ ಆಗಿರುವ ಅಭ್ಯರ್ಥಿಗಳನ್ನೇ ಇದಕ್ಕೂ ನಾವು ಅಡಿಷನಲ್ ಆಗಿ ಸೇರಿಸುವ ಸಂಬಂಧ ಇವ್ವೊತ್ತು ಕಾನೂನು ಪ್ರಕಾರ ಸಾಧ್ಯವಾದರೆ, ನಾನು ಸಂಬಂಧಪಟ್ಟವರೊಂದಿಗೆ ಚರ್ಚೆ ಮಾಡಿ ಈ ವಿಷಯದಲ್ಲಿ ಅಡಿಷನಲ್ ಲಿಸ್ಟ್ ತರಿಸಲಿಕ್ಕೆ ಪ್ರಯತ್ನಪಡುತ್ತೇನೆ.

(ಋ) ರಾಷ್ಟ್ರೀಯ ತೋಟಗಾರಿಕಾ ಮಿಷನ್‌ಗೆ ನಿರ್ದೇಶಕರನ್ನು ನೇಮಿಸುವ ಬಗ್ಗೆ.

ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ) :– ಮಾನ್ಯ ಅಧ್ಯಕ್ಷರೆ, ಮೊನ್ನೆ ಕೇಂದ್ರ ಸರ್ಕಾರ ಬಜೆಟ್ ಮಂಡನೆ ಮಾಡುವಾಗ National Horticulture Missionಗೆ ಹೆಚ್ಚು ಒತ್ತು ಕೊಟ್ಟು ಕರ್ನಾಟಕಕ್ಕೆ 85 ಕೋಟಿ ರೂಪಾಯಿಗಳಷ್ಟು ಹಣವನ್ನು ವಿನಿಯೋಗಿಸಿದ್ದಾರೆ. ಅದರಲ್ಲಿ ಉತ್ತರ ಕರ್ನಾಟಕ ಬಿಟ್ಟುಹೋಗಿತ್ತು. ಹಿಂದಿನ ಮುಖ್ಯಮಂತ್ರಿಗಳಾದ ಧರ್ಮಸಿಂಗ್‌ರವರು ಅದನ್ನು ಸೇರಿಸಿ ನಮಗೆ ಸಹಾಯ ಮಾಡಿದ್ದಾರೆ. ಆದರೆ, Horticulture Missionಗೆ ಒಬ್ಬ ಡೈರೆಕ್ಟರ್ ಅಪಾಯಿಂಟ್‌ಮೆಂಟ್ ಮಾಡಬೇಕೆಂಬ ನಿರ್ಣಯವನ್ನು ಹಾಲಿ ಸರ್ಕಾರ ಕೈಗೊಂಡಿದೆ. ಅದರ ಪ್ರಕಾರ ಮುಖ್ಯಮಂತ್ರಿಗಳು ಕೂಡ 16–2–06ಕ್ಕೆ ಆದೇಶ ಮಾಡಿದ್ದರು. ಆದರೆ, ದುರ್ದೈವವಶಾತ್, Horticulture Minister ಆ ಫೈಲನ್ನು ಒಂದು ತಿಂಗಳಿನಿಂದಲೂ ಅಲ್ಲಿಯೇ ಇಟ್ಟುಕೂಂಡು ಕುಳಿತಿದ್ದಾರೆ. ದಯಮಾಡಿ ಏಕೆ ಅವರು ಇಟ್ಟುಕೊಂಡು ಕುಳಿತಿದ್ದಾರೆ? ನಮಗಂತೂ ಗೊತ್ತಾಗಿಲ್ಲ. ಬಹುಶಃ ನನಗನಿಸುತ್ತದೆ. ಇಕ್ರಾಂ ಉಲ್ಲಾ ಎನ್ನುವ ಒಬ್ಬ ಅಧಿಕಾರಿಗೆ ಪೋಸ್ಟಿಂಗ್ಸ್